ಕರ್ನಾಟಕ ಸರ್ಕಾರ

ಮಾರ್ಚ್ 28, 2017

## ಚಾಂದ್ರಮಾನ ಯುಗಾದಿ :
## ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ

ಬೆಂಗಳೂರು, ಮಾರ್ಚ್ 28 :

ಚಾಂದ್ರಮಾನ ಯುಗಾದಿ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ಮನೆಯ ಅಂಗಳದಲ್ಲಿ ರಂಗೋಲಿಯ ನರ್ತನ ! ಮನೆಯ ಬಾಗಿಲಲ್ಲಿ ಮಾವಿನ ತೋರಣ ! ಇಷ್ಟ ದೇವರಿಗೆ ಪುಷ್ಪ ನಮನ ! ಮೆಲ್ಲಲು ಬೇವು–ಬೆಲ್ಲದ ಮಿಶ್ರಣ ! ಮನದ ದುಗುಡ ತಣಿಸಲು ಪಂಚಾಂಗ ಶ್ರವಣ ! ಮನೆಯೊಳಗೆ ಘಮಘಮಿಸುವ ಕಾಯಿ ಹೋಳಿಗೆಯ ಹೂರಣ ! ಮನೆ–ಮಂದಿಗೆಲ್ಲಾ ಎಳೆಯ ಬಾಳೆಯ ಎಲೆಯ ಮೇಲೆ ಸಮೃದ್ಧ ಭೋಜನ ! ಇದು ಯುಗಾದಿಯ ಸಡಗರ ಮತ್ತು ಸಂಭ್ರಮದ ಸ್ವಾರಸ್ಯಕರ ಕಥನ !

ಇಳೆಯಲ್ಲಿ ಸಕಾಲದಲ್ಲಿ ಮಳೆಯಾಗಿ, ಮಳೆಯಿಂದ ಸಮೃದ್ಧ ಬೆಳೆಯಾಗಿ, ಬೆಳೆದ ಬೆಳೆಗೆ ನ್ಯಾಯಯುತ ಬೆಲೆ ದೊರೆತು ರೈತರ ಬದುಕು ಹಸನಾಗಲಿ. ಹೇವಿಳಂಬಿ ನಾಮ ಸಂವತ್ಸರವು ನಮ್ಮೆಲ್ಲಾ ಕಾರ್ಯ ಚಟುವಟಿಕೆಗಳಲ್ಲೂ ವಿಳಂಬವನ್ನು ದೂರಮಾಡಲಿ. ಎಲ್ಲರಲ್ಲೂ ಯಶಸ್ಸು ಮನೆ ಮಾಡಲಿ. ಅಂತೆಯೇ, ಎಲ್ಲರ ಯಶಸ್ಸಿನಲ್ಲೂ ವೇಗ ಇರಲಿ. ಯುಗಾದಿ ಹಬ್ಬದ ಶುಭ ಸಂದರ್ಭದಲ್ಲಿ ರಾಜ್ಯದ ಜನತೆಗೆ ಇದುವೇ ನನ್ನ ಮನದಾಳದ ಹಾರೈಕೆ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*******

ಡಿ ಪಿ ಎಂ